

ಕಡಲ ತಡಿಯ ಗೋಕರ್ಣ ತೀರ್ಥಕ್ಷೇತ್ರವಾಗಿ ಸಾಕಷ್ಟು ಪ್ರಸಿದ್ಧಿ ಪಡೆದ ಜಾಗ. ಇಕ್ಕಟ್ಟಾದ ರಥಬೀದಿಯಲ್ಲಿ ನಿಧಾನ ಸಾಗುವ ತೇರಿನ ನಡಿಗೆ ಹೀಗಿರುತ್ತದೆ ನೋಡಿ.

## ಗಂಡು ದೇವರು, ಹೆಣ್ಣು ದೇವರು

ಜಾತ್ರೆಗಳು ಹೆಚ್ಚಾಗಿ ಗಂಡು ದೇವರ ಹೆಸರಿನಲ್ಲೇ ನಡೆಯುತ್ತವೆ. ಹೆಣ್ಣು ದೇವರುಗಳು ಕಡಿಮೆ. ಗಂಡು–ಹೆಣ್ಣು ದೇವರುಗಳ ತೇರನ್ನು ಬಹಳ ಕಡೆ ಗಂಡಸರೇ ಎಳೆಯುವುದು ರೂಢಿ. ಜಾತ್ರೆ, ರಥೋತ್ಸವಗಳಲ್ಲಿ ಮಹಿಳೆಯರು ಗಂಡ, ಮಕ್ಕಳೊಂದಿಗೆ ತೆರಳಿ ಪಾಲ್ಗೊಳ್ಳುವುದಕ್ಕಷ್ಟೇ ಸೀಮಿತ.

ಆದರೆ ಕೆಲವೆಡೆ ಮಹಿಳೆಯರದ್ದೇ ನೇತೃತ್ವ ಎಂದರೂ ಅಚ್ಚರಿ ಪಡುವಂತಿಲ್ಲ. ಅಲ್ಲಲ್ಲಿ ಮಹಿಳೆಯರೇ ಉತ್ಸವದ ನೇತೃತ್ವ ವಹಿಸುವುದು, ತೇರನ್ನು ಎಳೆಯುವುದು ನಡೆಯುತ್ತದೆ.

ಗುಂಡ್ಲುಪೇಟೆಯ ರಾಘವಾಪುರದ ಪಟ್ಟದಲಮ್ಮ ರಥೋತ್ಸವದಲ್ಲಿ ತೇರನ್ನು ಎಳೆಯುವವರು ಮಹಿಳೆಯರು. ಕೋಲಾರದ ಸೋಮನಾಥೇಶ್ವರ ರಥವನ್ನೂ ಮಹಿಳೆಯರೇ ಎಳೆಯುವುದು ವಿಶೇಷ. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಮುದೇನೂರಿನ ಉಮಾಚಂದ್ರಮೌಳೇಶ್ವರ ಜಾತ್ರೆಯಲ್ಲೂ ಮಹಿಳೆಯರದ್ದೇ ನೇತೃತ್ವ.

## ತೇರಾದ ಮೇಲೆ ನೆರೆಯುವ ಜಾತ್ರೆ!

ತೇರಿಗಾಗಿಯೇ ಜಾತ್ರೆ ನೆರೆಯುತ್ತದೆ ಎಂಬುದು ಸತ್ಯ. ಆದರೆ, ತೇರಾದ ಮೇಲೆ ನೆರೆಯುವ ಜಾತ್ರೆಯೇ ಬೇರೆ!

ಅದು, ಗುಡಿಗೆ ತೆರಳಿ ಕೈಮುಗಿಯುವ ಏಕಾಂತದ ಜಾತ್ರೆ. ಅದರಾಚೆಗಿರುವುದು ಮಜಾ. ಬೆಂಡು, ಬತ್ತಾಸು, ಮಂಡಾಳು, ಆಟಿಕೆ ಸಾಮಾನುಗಳು, ಬಳೆ, ಅಲಂಕಾರಿಕ ಸಾಮಗ್ರಿ, ಮನೆ ಬಳಕೆಗೆ ಬೇಕಾದ ವಸ್ತುಗಳ ಖರೀದಿಗೆ ಮಹಿಳೆಯರು ಮಕ್ಕಳ ಅವಸರ. ಖರೀದಿ ಬಳಿಕ ದೊಡ್ಡಾಟ, ಬಯಲಾಟ, ನಾಟಕ, ಸಿನಿಮಾ ನೋಡುವ, ಪೊಲೀಸರ ಕಣ್ಣು ಕದ್ದು ಜೂಜಾಟವಾಡುವ ಮನರಂಜನೆಯ ಜಾತ್ರೆ. ತಿಂಡಿ ತಿನಿಸುಗಳನ್ನು ಸವಿಯುವ ಸೊಗಸು.

'ಇಪ್ಪತ್ತು ರೂಪಾಯಿಗೆ ಐದು ಬಲೂನ್ ಶೂಟ್ ಮಾಡುವ ಸ್ಪರ್ಧೆ, 'ರಿಂಗ್ ಹಾಕಿ ಬಹುಮಾನ ಗೆಲ್ಲಿ' ರೀತಿಯ ಅಧಿಕೃತ ಜೂಜಾಟಕ್ಕೂ ಮಕ್ಕಳು–ಮರಿಯೆನ್ನದೆ ನೂಕುನುಗ್ಗಲು.

ನವದಂಪತಿಗಳು, ಪ್ರೇಮಿಗಳು, ಪರಸ್ಪರ ಕೈ ಹಿಡಿದು ತೇರಿನ ಆ ತುದಿಯಿಂದ ಈ ತುದಿಗೆ, ಈ ತುದಿಯಿಂದ ಆ ತುದಿಗೆ ಸುಮ್ಮನೆ ನಡೆದಾಡಿ ದಣಿಯುವ ಪ್ರಣಯದಾಟ. ನೋಡುಗರ ಕೂಟ. ಗಂಡ–ಹೆಂಡಿರು, ಮಕ್ಕಳ ಸಂಸಾರದ ಮೆರೆದಾಟ.

ರಂಕಲ್ ರಾಟೆಯಾಡಿ, ಪೀಪಿಯೂದಿ, ಐಸ್ ಕ್ಯಾಂಡಿ ಚೀಪುತ್ತಾ, ದೊಡ್ಡ ಬಲೂನು ಹಿಡಿದು ತೇಲಾಡುವ ಖುಷಿ, ಅರವಟಿಗೆ ಹಾಕಿ ಭಕ್ತರಿಗೆ ತಂಪಾದ ನೀರು, ಮಜ್ಜಿಗೆ, ನಿಂಬೆ ರಸ, ಮೊಸರನ್ನ, ಚಿತ್ರಾನ್ನ, ಕಡ್ಲೆ ಉಸ್ಲಿ ಹಂಚುವ ದಾಸೋಹದ ಧನ್ಯತೆ ದಾನಿಗಳಿಗೆ. ಜೇಬುಗಳ್ಳರ ಮೇಲೆ ಕಣ್ಣಿಡುವ ಕಾಯಕ ಪೊಲೀಸರಿಗೆ.



ಬೆಂಗಳೂರಿನಲ್ಲಿ ನಡೆಯುವ ಜಾತ್ರೆ, ಕರಗಗಳಿಗೆ ಲೆಕ್ಕವೇ ಇಲ್ಲ. ಎಲೆಕ್ಟ್ರಾನಿಕ್ ಸಿಟಿ ಸಮೀಪದ ಹುಸ್ಕೂರ್ ಮದ್ದೂರಮ್ಮ ಜಾತ್ರೆಯ ತೇರು. ತೇರು ಸಾಗುವ ದಾರಿಯಲ್ಲಿಯೇ ಇರುವ ಕಸದ ರಾಶಿ ಜಾತ್ರೆಯ ನೋಟಕ್ಕೆ ಮತ್ತೊಂದೇ ಆಯಾಮ ಕೊಡುವ ಹಾಗಿದೆ.

ಚಿತ್ರ: ದಿನೇಶ್ ಮಾನೀರ್